not to be printed

2nd Cover

## ನೀನಾಸಮ್ ಸಂಸ್ಕೃತಿ ಶಿಬಿರ
## ಅಕ್ಟೋಬರ್ ೨೦೧೧

ಕಳೆದೆರಡು ದಶಕಗಳಿಂದ ನೀನಾಸಮ್ ಪ್ರತಿವರ್ಷವೂ ಸಂಸ್ಕೃತಿ ಶಿಬಿರಗಳನ್ನು ನಡೆಸುತ್ತ ಬಂದಿದ್ದು ಅದರ ೨೦೧೧ರ ಅವತರಣಿಕೆ ಇದು. ಡಾ. ಯು.ಆರ್. ಅನಂತಮೂರ್ತಿ ಅವರು ನಿರ್ದೇಶಕರಾಗಿರುವ ಈ ಶಿಬಿರವು 'ದೇಶಭಾಷೆಗಳು' ಎಂಬ ವಿಷಯವನ್ನು ಕೇಂದ್ರೀಕರಿಸುತ್ತದೆ. ಕನ್ನಡದ ಸಾಂಸ್ಕೃತಿಕ ವಿದ್ಯಮಾನಗಳಲ್ಲಿ ಆಸಕ್ತರಾಗಿರುವ ನಮ್ಮ ನಾಡಿನ ಬಹುತೇಕರಿಗೆ ಭಾರತದ ಇನ್ನಿತರ ದೇಶಭಾಷೆಗಳಲ್ಲಿ ನಡೆಯುತ್ತಿರುವ ಸಾಹಿತ್ಯ-ಕಲಾಪ್ರಯೋಗಗಳ ಪರಿಚಯವಿಲ್ಲ; ಹಲವೊಮ್ಮೆ ಪಾಶ್ಚಾತ್ಯ ಸಂಸ್ಕೃತಿಯ ಜತೆಗಿರುವಷ್ಟು ಪರಿಚಯ ಕೂಡ ಈ ಭಾಷೆಗಳೊಂದಿಗೆ ಇಲ್ಲ. ಇಂಥ ವಿಪರ್ಯಾಸಕ್ಕೆ ಪ್ರತಿಸ್ಪಂದಿಯಾಗಿ ಭಾರತದ ಬೇರೆಬೇರೆ ದೇಶಭಾಷಾಸಂಸ್ಕೃತಿಗಳೊಂದಿಗೆ ಪರಿಚಯಾತ್ಮಕ ಸಂಪರ್ಕ ಕಲ್ಪಿಸುವುದು ಮತ್ತು ಕನ್ನಡಕ್ಕೂ ಬೇರೆ ದೇಶಭಾಷೆಗಳಿಗೂ ಇರುವ ಸಂಬಂಧವನ್ನು ಅವಲೋಕಿಸುವುದು – ಈ ಶಿಬಿರದ ಕಾರ್ಯಸೂಚಿಯಾಗಿದೆ.

ಈ ವಿಷಯಕ್ಕೆ ಸಂಬಂಧಿಸಿ, ಹಲವು ಉಪನ್ಯಾಸ-ಚರ್ಚೆಗಳು ಮತ್ತು ಪರಿಚಯಾತ್ಮಕ ಭಾಷಣಗಳು ಈ ಶಿಬಿರದುದ್ದಕ್ಕೂ ನಡೆಯಲಿದ್ದು, ಡಾ. ಯು.ಆರ್. ಅನಂತಮೂರ್ತಿ, ಶ್ರೀ ಜಾವೇದ್ ಅಖ್ತರ್, ಶ್ರೀ ಸಮೀಕ್ ಬ್ಯಾನರ್ಜಿ, ಶ್ರೀ ಶಿವ ವಿಶ್ವನಾಥನ್, ಶ್ರೀ ಆತಮ್‌ಜೀತ್ ಸಿಂಗ್, ಶ್ರೀ ಎಚ್.ಎಸ್. ವೆಂಕಟೇಶಮೂರ್ತಿ, ಶ್ರೀ ಒ.ಎಲ್. ನಾಗಭೂಷಣ ಸ್ವಾಮಿ, ಶ್ರೀ ಗಿರಡ್ಡಿ ಗೋವಿಂದರಾಜ, ಶ್ರೀ ಮಹಮದ್ ಫರೂಕಿ, ಶ್ರೀ ಅಜಯ ಜೋಷಿ, ಶ್ರೀ ಅತುಲ್ ತಿವಾರಿ, ಶ್ರೀ ಸುಂದರ ಸಾರುಕ್ಕೈ, ಶ್ರೀ ಕುಂ.ವೀರಭದ್ರಪ್ಪ, ಶ್ರೀ ಮನು ಚಕ್ರವರ್ತಿ, ಶ್ರೀ ವಿವೇಕ ಶಾನಭಾಗ, ಶ್ರೀಮತಿ ವೈದೇಹಿ, ಶ್ರೀಮತಿ ಎಚ್. ನಾಗವೇಣಿ, ಶ್ರೀಮತಿ ಜ.ನಾ. ತೇಜಶ್ರೀ, ಶ್ರೀ ಪ್ರಕಾಶ ಬೆಳವಾಡಿ, ಶ್ರೀ ಎಸ್. ದಿವಾಕರ್, ಶ್ರೀ ಎಸ್.ಆರ್. ವಿಜಯಶಂಕರ ಮೊದಲಾದವರು ಈ ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೆ, ಈ ಶಿಬಿರದ ಹಗಲಿನ ಕಾರ್ಯಕ್ರಮಗಳ ಭಾಗವಾಗಿ ಉರ್ದು, ಮರಾಠಿ, ಪಂಜಾಬಿ, ಮಲೆಯಾಳಮ್ ಮತ್ತು ತಮಿಳು ಭಾಷೆಯ ಕಾವ್ಯ-ಕಥೆ-ನಾಟಕಗಳನ್ನು ಆಧರಿಸಿದ ಕೆಲವು ಕಿರುಪ್ರಾತ್ಯಕ್ಷಿಕೆ ಮತ್ತು ಪ್ರದರ್ಶನಗಳು ಕೂಡಾ ಈ ಬಾರಿ ನಡೆಯಲಿವೆ.

ಜತೆಗೆ, ಶ್ರೀ ಕೆ.ಎಸ್. ರಾಜಾರಾಮ್, ಶ್ರೀ ಎ.ಎನ್. ಮುಕುಂದ್, ಶ್ರೀ ಚರಣ ಮೊದಲಾದವರು ಈ ಬಾರಿ ಛಾಯಾಗ್ರಹಣ ಮತ್ತು ರಂಗಕಲೆ ಕುರಿತು ಮುಂಜಾವಿನ ವಿಶೇಷ ತರಗತಿಗಳನ್ನು ನಡೆಸಲಿದ್ದಾರೆ. ಜತೆಗೆ, ಚಿತ್ರಗ್ರಾಹಕ ಶ್ರೀ ಎ.ಎನ್. ಮುಕುಂದ್ ಅವರು ಸಿದ್ಧಪಡಿಸಿರುವ ಕನ್ನಡ ಲೇಖಕರ ಒಂದು ಫೋಟೋ ಪ್ರದರ್ಶನವೂ ಕೂಡಾ ಸಂಜೆಯ ಹೊತ್ತು ನಡೆಯಲಿದೆ. ಇನ್ನುಳಿದ ಸಂಜೆಯ ಕಾರ್ಯಕ್ರಮಗಳ ವಿವರಗಳು ಮುಂದಿನ ಪುಟಗಳಲ್ಲಿವೆ.

ನೀನಾಸಮ್, ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭

not to be printed

3rd Cover

## NINASAM
## CULTURE COURSE 2011

The Culture Course has been one of Ninasam's major annual events for the last two decades. Held over 7 days every October, The Course is designed around a specific theme, and organised as a combination of special lectures on the theme, lecture-demonstration-discussions on appreciation of art forms during the day-sessions, and a series of cultural programmes in the evenings. The evening festival this year consists of the following programmes:

- **2nd October, Sunday:** Ninasam Tirugata Performance - ***Kantu;*** play based on the Kannada story by Vivek Shanbhag, Directed by Channakehava
- **3rd October, Monday:** Ninasam Tirugata Performance - ***Nammolagina Basheer;*** play based on the stories by Vaikkom Muhammad Basheer, Directed by Rajeev Krishnan
- **4th October, Tuesday:** Ninasam Performance - ***Shishira Vasantha;*** Based on Shakespeare's *The Winter's Tale*; Directed by Akshara K.V.
- **5th October, Wednesday:** Hindustani Instrumental Recital by **Vijetha Anathi** (Sarod) and **Sameera Rao** (Flute)
- **6th October, Thursday:** Karnatic Vocal Recital by **Vid. R.N. Srilata,** Mysore
- **7th October, Friday:** Sangit Natak performance by Bharat Natya Sanshodhan Mandir, Pune - ***Katyar Kaljaat Ghusali***
- **8th October, Saturday:** Theatre performance by Rangayana, Mysore - ***Gora,*** based on the novel by Rabindranath Tagore, Directed by Prakash Belawadi

**Ninasam, Heggodu, Sagara**
**Karnataka 577 417**

not to be printed

Page 1

**ಅಕ್ಟೋಬರ್ ೨ ಭಾನುವಾರ**

photo to be printed here
see cd for the photo with this file no.

**02CC11**

ತಿರುಗಾಟ ನಾಟಕ

## ಕಂತು

ವಿವೇಕ ಶಾನಭಾಗ ಅವರ ಕಥೆ ಆಧರಿಸಿದ ಪ್ರಯೋಗ

**ನಿರ್ದೇಶನ: ಚನ್ನಕೇಶವ**

ಕನ್ನಡದ ಹೊಸ ತಲೆಮಾರಿನ ಕಥೆಗಾರ ವಿವೇಕ ಶಾನಭಾಗರ ಇದೇ ಹೆಸರಿನ ಕಥೆಯನ್ನು ಆಧರಿಸಿ ರೂಪಿಸಲಾಗಿರುವ ರಂಗಪ್ರಯೋಗ ಇದು. ಕರಾವಳಿಯ ಒಂದು ಪುಟ್ಟ ಊರಿನಲ್ಲಿ ಸಂಭವಿಸುವ ಒಂದು ಸಂಪೂರ್ಣ ಸೂರ್ಯಗ್ರಹಣ ಮತ್ತು ಅಲ್ಲಿ ಕಟ್ಟಲಾಗುತ್ತದೆ ಎಂದು ಸುದ್ದಿ ಹಬ್ಬುವ ಒಂದು ಅಣೆಕಟ್ಟು – ಇವೆರಡು ಘಟನೆಗಳಿಂದ ಚೋದಿತವಾಗಿ ಆ ಊರಿನ ಬದುಕಿನಲ್ಲಾಗುವ ವಿಚಿತ್ರ ಏರಿಳಿತಗಳನ್ನು ಈ ಕಥೆ ಕೇಂದ್ರವಾಗಿ ಇಟ್ಟುಕೊಂಡಿದೆ. ಒಂದು ಕಡೆಗೆ, ಗ್ರಹಣದ ಬಗ್ಗೆ ಊರಲ್ಲಿ ನಡೆಯುವ ಜಿಜ್ಞಾಸೆಗಳು ಮತ್ತು ಗ್ರಹಣವನ್ನು ನೋಡಲು ದೇಶವಿದೇಶದಿಂದ ಆಗಮಿಸುವ ಜನರ ಒತ್ತಡ – ಇವು ಊರಿನ ಬದುಕಿನ ಮೇಲೆ ಪರಿಣಾಮ ಮಾಡುತ್ತಹೋದರೆ ಇನ್ನೊಂದೆಡೆ, ಊರಿನಲ್ಲಿ ಕಟ್ಟಲಾಗುವ ಅಣೆಕಟ್ಟಿನ ಸಿದ್ಧತೆಗಾಗಿ ಬರುವ ಅಧಿಕಾರಿಗಳು, ಅಣೆಕಟ್ಟಿನಿಂದ ಸಮುದಾಯದ ಮೇಲಾಗುವ ಪರಿಣಾಮಗಳು ಮತ್ತು ಆ ಅಣೆಕಟ್ಟನ್ನು ಪ್ರತಿಭಟಿಸಿ ನಡೆಯುವ ಕಾರ್ಯಕ್ರಮಗಳು – ಇವು ಊರನ್ನು ಬೇರೆಬೇರೆ ರೀತಿಗಳಿಂದ ಅಲ್ಲಾಡಿಸಲು ಆರಂಭಿಸುತ್ತವೆ. ಈ ಎಲ್ಲ ಸ್ಥಿತ್ಯಂತರಗಳ ಫಲವಾಗಿ ಊರಿನ ಮನೋಭೂಮಿಕೆಯಲ್ಲೇ ಆತ್ಯಂತಿಕ ಬದಲಾವಣೆ ಆಗುತ್ತಹೋಗುವುದನ್ನು ಈ ಕಥೆ ಬಗೆಬಗೆಯ ಘಟನೆಗಳ ಮೂಲಕ ನಿರೂಪಿಸುತ್ತಹೋಗುತ್ತದೆ.

ಕಥೆಯ ಈ ಸ್ಥಿತ್ಯಂತರಗಳನ್ನು ನಾಟಕೀಯ ಪ್ರತಿಮೆಗಳಲ್ಲಿ ಕಟ್ಟುವ ಮೂಲಕ ಪ್ರಸ್ತುತ ಪ್ರಯೋಗವು ಈ ಕಥೆಯ ಭಿತ್ತಿಯಲ್ಲಿ ಸಮಕಾಲೀನ ಲೋಕದ ಸಾಮಾಜಿಕ-ಸಾಂಸ್ಕೃತಿಕ ವಾಸ್ತವಗಳನ್ನು ಗ್ರಹಿಸಲು ಯತ್ನಿಸುತ್ತದೆ.

**ಸಂಜೆ ೭ ಗಂಟೆಗೆ**

not to be printed

Page 2

**ಅಕ್ಟೋಬರ್ ೩ ಸೋಮವಾರ**

photo to be printed here
see cd for the photo with this file no.

**03CC11**

ತಿರುಗಾಟ ನಾಟಕ

## ನಮ್ಮೊಳಗಿನ ಬಶೀರ್

ವೈಕಂ ಮುಹಮದ್ ಬಶೀರ್ ಕಥೆಗಳನ್ನಾಧರಿಸಿದ ಪ್ರಯೋಗ

**ನಿರ್ದೇಶನ: ರಾಜೀವ ಕೃಷ್ಣನ್**

೨೦ನೆಯ ಶತಮಾನದ ಭಾರತದ ಕತೆಗಾರರಲ್ಲಿ ಅತ್ಯಂತ ಪ್ರಸಿದ್ಧವೂ ಗಣ್ಯವೂ ಆಗಿರುವ ಹೆಸರು ಮಲೆಯಾಳಮ್ ಭಾಷೆಯ ವೈಕಮ್ ಮುಹಮದ್ ಬಶೀರ್ ಅವರದ್ದು. ಸ್ವಾತಂತ್ರಹೋರಾಟಗಾರರೂ ಆಗಿದ್ದ ಬಶೀರ್ ಅವರು ಗಹನ-ಗ್ರಾಂಥಿಕ ಭಾಷೆಯನ್ನು ಕೈಬಿಟ್ಟು ಸರಳವಾದ ಮತ್ತು ಮೆಲುವಾದ ಹಾಸ್ಯಭರಿತ ಶೈಲಿಯಲ್ಲಿ ತಮ್ಮ ಕತೆಗಳನ್ನು ಬರೆದವರು. ಸಮಕಾಲೀನ ಮಲೆಯಾಳ ನಾಡಿನ ನಿತ್ಯಬದುಕಿನ ಜನಸಾಮಾನ್ಯರ ಬದುಕುಗಳನ್ನು ಭಿತ್ತಿಯಾಗಿಟ್ಟುಕೊಂಡೇ ಅವರು ಅತ್ತ ವಿಡಂಬನೆಯೂ ಅಲ್ಲದ ಇತ್ತ ದಾರುಣವೂ ಆಗದ ಸಮತೂಕದ ಪಾತ್ರಗಳನ್ನು ಸೃಷ್ಟಿಸಿದ್ದಾರೆ; ಮತ್ತು ಆ ಮೂಲಕ ತಮ್ಮದೇ ಆದ ವಿಶಾಲ ಲೋಕದರ್ಶನವೊಂದನ್ನು ನಮ್ಮೆದುರಿಗೆ ತೆರೆಸುತ್ತಾರೆ. ‘ಅಮ್ಮ’, ‘ಟೈಗರ್’, ‘ಗೋಡೆಗಳು’, ‘ವಿಶ್ವವಿಖ್ಯಾತವಾದ ಮೂಗು’, ‘ಪೂವನ್ ಫಳಮ್’, ‘ಮಂತ್ರಚರತು’, ‘ಸಂಧ್ಯಾಪ್ರಣಾಮಮ್’ ಮತ್ತು ‘ಬಾಲ್ಯಕಾಲದ ಸಖಿ’ – ಅವರ ಈ ಪ್ರಮುಖ ಕತೆಗಳಿಂದ ಆಯ್ದ ಭಾಗಗಳನ್ನು ಸಡಿಲವಾಗಿ ಹೆಣೆದು ಪ್ರಸ್ತುತ ರಂಗಪ್ರಯೋಗವಾಗಿ ರೂಪುಗೊಳಿಸಲಾಗಿದೆ. ಸ್ವತಃ ಬಶೀರ್ ಅವರನ್ನು ಈ ನಾಟಕದ ಒಂದು ಸೂತ್ರಪಾತ್ರವಾಗಿ ತರಲಾಗಿದೆ; ಮತ್ತು ಆ ಪಾತ್ರವು ಮಾಡುತ್ತ ಹೋಗುವ ಆತ್ಮಕಥನವನ್ನು ಹೋಲುವ ನಿರೂಪಣೆಯಲ್ಲಿ ಈ ಕಥೆಗಳು ಪಸ್ಪರ ಸಂಬಂಧದಲ್ಲಿ ಒಂದು ಕಥನವಾಗಿ ಹೆಣೆದುಕೊಳ್ಳುತ್ತವೆ.

ಪ್ರಸ್ತುತ ಪ್ರಯೋಗಕ್ಕಾಗಿ ಈ ಕತೆಗಳನ್ನು ಕೆ.ಕೆ. ನಾಯರ್ ಮತ್ತು ವೈದೇಹಿ ಕನ್ನಡೀಕರಿಸಿದ್ದಾರೆ; ರಂಗರೂಪ ರಾಜೀವ ಕೃಷ್ಣನ್ ಅವರದು.

**ಸಂಜೆ ೭ ಗಂಟೆಗೆ**

not to be printed
Page 3

ಅಕ್ಟೋಬರ್ ೪ ಮಂಗಳವಾರ

photo to be printed here
see cd for the photo with this file no.

04CC11

ನೀನಾಸಮ್ ನಾಟಕ

## ಶಿಶಿರ ವಸಂತ

ಶೇಕ್ಸ್ಪಿಯರನ 'ದಿ ವಿಂಟರ್ಸ್ ಟೇಲ್' ನಾಟಕದ ಕನ್ನಡ ರೂಪ

**ನಿರ್ದೇಶನ:ಅಕ್ಷರ ಕೆ.ವಿ.**

ಶೇಕ್ಸ್‌ಪಿಯರ್ ತನ್ನ ಬರಹದ ಬದುಕಿನ ಕಡೆಯ ಘಟ್ಟದಲ್ಲಿ ಬರೆದ ರಮ್ಯ-ಹರ್ಷ-ದುರಂತ ಮಿಶ್ರಿತ ಗುಣದ ನಾಟಕಗಳಲ್ಲೊಂದು – 'ದಿ ವಿಂಟರ್ಸ್ ಟೇಲ್'. ಶಿಶಿರದಲ್ಲಿ ಆರಂಭವಾಗಿ ವಸಂತದಲ್ಲಿ ಮುಕ್ತಾಯ ಗೊಳ್ಳುವ ಈ ನಾಟಕವು ಮೂಲತಃ ಕೌಟುಂಬಿಕ ಸಂಘರ್ಷಗಳಲ್ಲಿ ಮೊದಲುಗೊಂಡು ಅಂತಿಮವಾಗಿ ಸಾಮರಸ್ಯ ಸಾಧನೆಯ ದಿಕ್ಕಿಗೆ ಸಾಗುವ ಒಂದು ರೂಪಕಾತ್ಮಕ ಕಥೆ. ಲಿಯಾಂಟೆಸ್ ಮತ್ತು ಪಾಲಿಕ್ಸೆನಸ್ ಎಂಬ ಅಕ್ಕಪಕ್ಕದ ರಾಜ್ಯಗಳ ರಾಜರ ಸಂಬಂಧದಲ್ಲಿ ಹುಟ್ಟುವ ಅಕಾರಣ ಸಂಶಯವು ಬೆಳೆದು ಹಲವು ದುರಂತಗಳಿಗೆ ಕಾರಣವಾಗುವುದು ಮತ್ತು ರಾಜ ಲಿಯಾಂಟೆಸ್ ಅಂತಿಮವಾಗಿ ಮನಃಪರಿವರ್ತನೆಗೊಳಗಾಗುವುದು – ಈ ನಾಟಕದ ಪ್ರಥಮಾರ್ಧ. ದ್ವಿತೀಯಾರ್ಧದಲ್ಲಿ ಗಡಿಪಾರಾದ ಲಿಯಾಂಟೆಸ್‌ನ ಹೆಣ್ಣುಮಗು ಸಾಯದೆ ಉಳಿದು, ಪಾಲಿಕ್ಸೆನಸ್‌ನ ಮಗನೊಂದಿಗೆ ಪ್ರೀತಿ ಬೆಳೆಸಿ, ನಾನಾ ಬಗೆಯ ನಾಟಕೀಯ ತಿರುವುಗಳ ಮೂಲಕ ಮರಳಿ ಲಿಯಾಂಟೆಸ್‌ನ ರಾಜ್ಯಕ್ಕೇ ಬರುವ ಮತ್ತು ಅಲ್ಲಿ ಎಲ್ಲ ಕಥನದ ಎಳೆಗಳೂ ಒಟ್ಟಯಿಸಿ ಸುಖಾಂತ್ಯಕ್ಕೆ ತಲುಪುವ ಕಥೆಯಿದೆ. ಗಂಡುಹೆಣ್ಣಿನ ಸಂಬಂಧ, ದಾಂಪತ್ಯ, ಪ್ರಕೃತಿ ಮತ್ತು ಸಂಸ್ಕೃತಿಗಳ ಹಾಗೂ ಕಲೆ ಮತ್ತು ವಾಸ್ತವಗಳ ನಡುವಿನ ಸಂಘರ್ಷ – ಇವೇ ಮೊದಲಾದ ದಾರ್ಶನಿಕ ಪ್ರಶ್ನೆಗಳು ಈ ನಾಟಕದ ಭಿತ್ತಿಯಲ್ಲಿ ಹುದುಗಿಕೊಂಡಿವೆ.

ಹೆಗ್ಗೋಡು ಸುತ್ತಮುತ್ತಲಿನ ನೀನಾಸಮ್ ಬಳಗವು ವರ್ಷಕ್ಕೊಮ್ಮೆ ಕೂಡಿ ತಯಾರಿಸುವ ನಾಟಕಸರಣಿಯಲ್ಲಿ ಬಂದ ೨೦೧೧ರ ಪ್ರಯೋಗ ಇದು.

**ಸಂಜೆ ೭ ಗಂಟೆಗೆ**

not to be printed
Page 4

ಅಕ್ಟೋಬರ್ ೫ ಬುಧವಾರ

photo to be printed here
see cd for the photo with this file no.

05CC11a

ಹಿಂದುಸ್ತಾನಿ ಸರೋದ್ ವಾದನ

## ವಿಜೇತ ಅಣತಿ

ಮತ್ತು ಸಹಕಲಾವಿದರಿಂದ

ವಿಜೇತ ಅಣತಿ ಅವರು ಮೈಹರ್ ಘರಾನಾದ ಯುವ ಸರೋದ್ ವಾದಕರು. ಹೆಸರಾಂತ ಸರೋದ್ ವಾದನ ಪರಿಣಿತರೂ ಕನ್ನಡದ ಪ್ರಸಿದ್ಧ ಲೇಖಕರೂ ಆದ ಪಂ. ರಾಜೀವತಾರಾನಾಥ್ ಅವರ ಶಿಷ್ಯರು. ಸಂಗೀತ ಪ್ರೇಮಿಗಳಾದ ಕವಿ ಸತ್ಯನಾರಾಯಣರಾವ್ ಅಣತಿ ಮತ್ತು ಶ್ರೀಮತಿ ಪ್ರಭಾ ಅಣತಿ ಅವರ ಮಗ. ಚಿಕ್ಕ ವಯಸ್ಸಿನಿಂದಲೇ ತಬಲಾ ಮತ್ತು ಹಿಂದೂಸ್ಥಾನಿ ಹಾಡುಗಾರಿಕೆಯನ್ನು ಅಭ್ಯಾಸ ಮಾಡಿದ ವಿಜೇತ ಅಣತಿ ಅವರು ಸಂಗೀತಪರೀಕ್ಷೆಗಳಲ್ಲಿ ಉತ್ತಮದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕಂಪ್ಯೂಟರ್ ಸೈನ್ಸ್ ಪದವೀಧರರಾದ ವಿಜೇತ ಅವರು ಸದ್ಯ, ಮೈಸೂರಿನ ಎನ್.ಐ.ಇ (ಐಟಿ) ಇಂಜಿನಿಯರಿಂಗ್ ಕಾಲೇಜಿನಲ್ಲಿ ಸಹ ಪ್ರಾಧ್ಯಾಪಕರು.

ಬಾಲಕಲಾವಿದನಾಗಿಯೇ ಆಕಾಶವಾಣಿಯ ಬೆಂಗಳೂರು, ಭದ್ರಾವತಿ, ಹಾಸನ ಮೊದಲಾದ ಕೇಂದ್ರಗಳಲ್ಲಿ ಅವರು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಪ್ರಸ್ತುತ ಅವರು ಧಾರವಾಡ ಆಕಾಶವಾಣಿ ಕೇಂದ್ರದ 'ಬಿ-ಹೈ' ದರ್ಜೆಯ ಕಲಾವಿದರಾಗಿದ್ದಾರೆ. ಕಳೆದ ಒಂದು ವರ್ಷದಿಂದ ಸರೋದ್ ವಾದನ ಕಾರ್ಯಕ್ರಮಗಳನ್ನು ನೀಡುತ್ತಿರುವ ಇವರು ಮುಂಬೈ, ಬೆಂಗಳೂರು, ಮೈಸೂರು, ಹೊನ್ನಾವರ, ಬಳ್ಳಾರಿ, ಶಿವಮೊಗ್ಗ, ಕುಪ್ಪಳಿ ಮೊದಲಾದ ಸ್ಥಳಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಯುವ ಸಂಗೀತೋತ್ಸವವೂ ಸೇರಿದಂತೆ ಹಲವಾರು ಪ್ರತಿಷ್ಠಿತ ಸಂಗೀತ ವೇದಿಕೆಗಳಲ್ಲಿ ಕೂಡಾ ಇವರು ಕಾಣಿಸಿಕೊಂಡಿದ್ದಾರೆ.

ಈ ಕಾರ್ಯಕ್ರಮದಲ್ಲಿ ತಬಲಾ ಸಾಥಿ ನೀಡುವವರು – ಶ್ರೀ ಮಿಲಿಂದ.

**ಸಂಜೆ ೭ ಗಂಟೆಗೆ (ಪ್ರಥಮಾರ್ಧ)**

not to be printed

Page 5

**ಅಕ್ಟೋಬರ್ ೫ ಬುಧವಾರ**

photo to be printed here
see cd for the photo with this file no.

**05CC11b**

ಹಿಂದುಸ್ತಾನಿ ಕೊಳಲು ವಾದನ

## ಸಮೀರ ರಾವ್

ಮತ್ತು ಸಹಕಲಾವಿದರಿಂದ

ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿಯೇ ಬಾನ್‌ಸುರಿ ವಾದನದಿಂದ ಆಕರ್ಷಿತರಾದ ಸಮೀರ ರಾವ್ ಅವರು ಮೈಸೂರಿನ ಪಂ. ವೀರಭದ್ರಯ್ಯ ಹಿರೇಮಠ ಅವರಿಂದ ಹಿಂದುಸ್ತಾನಿ ಗಾಯನದ ಪ್ರಾರಂಭದ ಶಿಕ್ಷಣ ಪಡೆದರು. ಮುಂದೆ, ೨೦೦೨ರಲ್ಲಿ, ಅವರಿಗೆ ನಾಡಿನ ಮಹಾನ್ ಕೊಳಲು ವಾದಕರೆಂದು ಪ್ರಸಿದ್ಧರಾಗಿರುವ ಪಂ. ಹರಿಪ್ರಸಾದ ಚೌರಾಸಿಯಾರ ಬಳಿ ಶಿಷ್ಯರಾಗುವ ಅವಕಾಶ ದೊರಕಿತು. ೨೦೧೦ರವರೆಗೂ ಚೌರಾಸಿಯಾರ ಮುಂಬಯಿಯ ವೃಂದಾವನ ಗುರುಕುಲದಲ್ಲಿ ಅಭ್ಯಾಸ ಮಾಡಿದ ಇವರು ಬಳಿಕ, ಒರಿಸ್ಸಾದ ಭುವನೇಶ್ವರದಲ್ಲಿ ಗುರುಗಳು ಹೊಸತಾಗಿ ಆರಂಭಿಸಿದ ಕೊಳಲು ಶಾಲೆಯಲ್ಲಿ ಮುಖ್ಯಸ್ಥರಾಗಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ.

ಗುರುಗಳೊಂದಿಗೆ ಹಲವು ಕಾರ್ಯಕ್ರಮಗಳಲ್ಲಿ ಸಹವಾದಕರಾಗಿರುವ ಸಮೀರ ಅವರು ಸ್ವತಂತ್ರವಾಗಿ ಕೂಡ ಹಲವಾರು ಕಾರ್ಯಕ್ರಮ ನೀಡಿದ್ದಾರೆ. ಭಾರತದ ಹಲವು ನಗರಗಳೇ ಅಲ್ಲದೆ, ಫ್ರಾನ್ಸ್, ಇಂಗ್ಲೆಂಡ್, ನಾರ್ವೆ, ಸ್ವಿಟ್ಸರ್ಲೆಂಡ್, ಚೀನಾ ಮೊದಲಾದ ದೇಶಗಳಲ್ಲೂ ಕಾರ್ಯಕ್ರಮ ಕೊಟ್ಟಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಶಿಷ್ಯವೇತನ ಹಾಗೂ ಆಕಾಶವಾಣಿಯ ಮಾನ್ಯತೆ ಪಡೆದಿರುವ ಇವರಿಗೆ ಕರ್ನಾಟಕ ಸರ್ಕಾರದಿಂದ ಯುವಪ್ರತಿಭಾ ಪುರಸ್ಕಾರ ದೊರಕಿದೆ; ಮೈಸೂರಿನ ನಾದಬ್ರಹ್ಮ ಸಂಗೀತಸಭಾದಿಂದ 'ನಾದಕಿಶೋರ' ಎಂಬ ಬಿರುದೂ ಹಾಗೂ ಮುಂಬಯಿಯ ಸುರಸಿಂಗಾರ ಸಂಸದ್‌ನಿಂದ ೨೦೦೮ರಲ್ಲಿ 'ಸುರಮಣಿ' ಎಂಬ ಪದವಿಯೂ ದೊರಕಿದೆ.

ಕಾರ್ಯಕ್ರಮದಲ್ಲಿ ತಬಲಾ ಸಾಥಿಯಾಗಿರುವವರು – ಶ್ರೀ ತ್ರಿಲೋಚನ ಕಂಪ್ಲಿ.

**ಸಂಜೆ ೮.೩೦ ಗಂಟೆಗೆ (ದ್ವಿತೀಯಾರ್ಧ)**

not to be printed

Page 6

**ಅಕ್ಟೋಬರ್ ೬ ಗುರುವಾರ**

photo to be printed here
see cd for the photo with this file no.

**06CC11**

ಕರ್ನಾಟಕ ಸಂಗೀತ ಗಾಯನ

## ವಿ। ಆರ್.ಎನ್. ಶ್ರೀಲತಾ

ಮತ್ತು ಸಹಕಲಾವಿದರಿಂದ

ಕಳೆದ ೪೦ ವರ್ಷಗಳಿಂದ ಸಂಗೀತ ಕಲಾವಿದರಾಗಿ ಶಿಕ್ಷಕಿಯಾಗಿ ಪ್ರಸಿದ್ಧರಾದ ವಿ। ಆರ್. ಎನ್. ಶ್ರೀಲತಾ ಕರ್ನಾಟಕ ಸಂಗೀತಕ್ಕೆ ಮಹತ್ತ್ವದ ಕಲಾವಿದರನ್ನು ಕೊಟ್ಟ ರುದ್ರಪಟ್ಟಣಂ ಕುಟುಂಬದವರು. ತಂದೆ ವಿ। ಆರ್.ಎನ್. ನಾರಾಯಣಸ್ವಾಮಿ ಅವರಿಂದ ಸಂಗೀತ ಶಿಕ್ಷಣ ಆರಂಭಿಸಿದ ಶ್ರೀಲತಾ ಅವರು ಬಳಿಕ, ಸಹೋದರ ಆರ್.ಎನ್. ತ್ಯಾಗರಾಜನ್ ಅವರೊಡನೆ ಅಭ್ಯಾಸ ಮಾಡಿದರು. ಶೈಕ್ಷಣಿಕವಾಗಿಯೂ ಸಂಗೀತಾಧ್ಯಯನ ಮಾಡಿರುವ ಇವರು ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದಾರೆ. ಪ್ರಸ್ತುತ ಹಲವು ಶಿಷ್ಯರಿಗೆ ಶಿಕ್ಷಣ-ಮಾರ್ಗದರ್ಶನ ನೀಡುತ್ತಿರುವುದಲ್ಲದೆ, ಮೈಸೂರು ವಿಶ್ವವಿದ್ಯಾಲಯದ ಲಲಿತಕಲೆಗಳ ಕಾಲೇಜಿನಲ್ಲಿ ಕರ್ನಾಟಕ ಸಂಗೀತದ ಪ್ರಾಧ್ಯಾಪಕರಾಗಿಯೂ ಕೂಡ ಕೆಲಸ ನಿರ್ವಹಿಸುತ್ತಿದ್ದಾರೆ.

ಆಕಾಶವಾಣಿ ಮತ್ತು ದೂರದರ್ಶನಗಳಲ್ಲದೆ ಮೈಸೂರಿನ ದಸರಾ ಉತ್ಸವ, ಚೆನ್ನೈನ ಮ್ಯಾಸಿಕ್ ಅಕಾಡೆಮಿಗಳಲ್ಲೂ ಮುಂಬಯಿ, ಬೆಂಗಳೂರು, ಕಲ್ಕತ್ತಾದ ಪ್ರತಿಷ್ಠಿತ ಉತ್ಸವಗಳಲ್ಲೂ ಹಾಗೂ ಅಮೇರಿಕಾ, ಸಿಂಗಾಪುರ, ಮಲೇಶಿಯಾ ಮೊದಲಾಗಿ ವಿದೇಶಗಳಲ್ಲೂ ಇವರ ಕಾರ್ಯಕ್ರಮಗಳು ನಡೆದಿವೆ. ಸಂಗೀತ ರತ್ನ, ನಾದಜ್ಯೋತಿ, ಸಂಗೀತಕಲಾತಪಸ್ವಿ, ಕರ್ನಾಟಕ ಕಲಾಶ್ರೀ ಮೊದಲಾದ ಹಲವಾರು ಪ್ರಶಸ್ತಿ-ಪುರಸ್ಕಾರಗಳು ಇವರಿಗೆ ಸಂದಿವೆ.

ಪ್ರಸ್ತುತ ಕಾರ್ಯಕ್ರಮದಲ್ಲಿ ವಿ. ಶ್ರೀಲತಾ ಅವರ ಸಹಕಲಾವಿದರು – ಶ್ರೀ ಎಂ.ಎಸ್. ಸುಘೋಷ್ (ವಯೋಲಿನ್), ಶ್ರೀ ಜಿ. ಎಸ್. ರಾಮಾನುಜಮ್ (ಮೃದಂಗಮ್) ಮತ್ತು ಶ್ರೀ ವಿ.ಎಸ್. ರಮೇಶ್ (ಘಟಮ್).

**ಸಂಜೆ ೬ ಗಂಟೆಗೆ**

not to be
printed
↓
Page 7

## ಅಕ್ಟೋಬರ್ ೭ ಶುಕ್ರವಾರ

photo to be printed here
see cd for the photo with this file no.
↓
**07CC11**

ಮರಾಠಿ ಸಂಗೀತ ನಾಟಕ

# ಕಟ್ಯಾರ್ ಕಾಳಜಾತ್ ಘುಸಲಿ

ಪುಣೆಯ ಭರತನಾಟ್ಯಸಂಶೋಧನ ಮಂದಿರ ತಂಡದ ಕಲಾವಿದರಿಂದ

**ಸಂಗೀತ: ಪಂ. ಜಿತೇಂದ್ರ ಅಭಿಷೇಕಿ, ನಿರ್ದೇಶನ: ರವೀಂದ್ರ ಖರೆ**

ಸಂಗೀತ ಮತ್ತು ನಾಟಕಗಳನ್ನು ಅನನ್ಯವಾಗಿ ಕೂಡಿಸಿ ಕಟ್ಟಿದ ಸಂಗೀತನಾಟಕ ಎಂಬ ಪ್ರಕಾರವು ಮರಾಠಿಯಲ್ಲಿ ೧೨೫ಕ್ಕೂ ಹೆಚ್ಚು ವರ್ಷಗಳ ಪರಂಪರೆಯನ್ನು ಹೊಂದಿದೆ. ಈ ಪ್ರಕಾರವನ್ನು ಬಳಸಿ ಶತಮಾನಕ್ಕೂ ಹೆಚ್ಚು ಇತಿಹಾಸವುಳ್ಳ ತಂಡವೊಂದು ಸಾದರಪಡಿಸುತ್ತಿರುವ ನಾಟಕ ಇದು.

ಪುರುಷೋತ್ತಮ ದರವೇಕರ್ ಅವರು ೧೯೬೭ರಲ್ಲಿ ಬರೆದ ಈ ನಾಟಕದ ಕಥೆ ಎರಡು ಸಂಗೀತ ಘರಾಣೆಗಳ ನಡುವಿನ ಪೈಪೋಟಿಯನ್ನು ಕುರಿತದ್ದು. ಪಂಡಿತ ಭಾನುಶಂಕರಜಿ ಮತ್ತು ಖಾನ್ ಸಾಹೇಬ್ ಎಂಬ ವಿಭಿನ್ನ ಘರಾಣೆಯ ಇಬ್ಬರು ಗುರುಗಳು ಒಂದು ದಶಕ ಕಾಲ ಪೈಪೋಟಿ ನಡೆಸಿ ಕಡೆಗೆ ಖಾನ್‌ಸಾಹೇಬ್ ಆ ಸಂಘರ್ಷದಲ್ಲಿ ಗೆದ್ದು ಆಸ್ಥಾನಕ್ಕೆ ಸೇರುತ್ತಾರೆ; ಸದಾಶಿವನೆಂಬ ಹೊಸ ವಿದ್ಯಾರ್ಥಿ ಖಾನ್ ಸಾಹೇಬರ ಶಿಷ್ಯತ್ವ ಸಿಕ್ಕದೆ, ಕಡೆಗೆ ಇಬ್ಬರು ಗುರುಗಳ ಮಕ್ಕಳಾದ ಉಮಾ ಮತ್ತು ಜರೀನಾರ ಸಹಾಯ ಪಡೆದು ಘರಾಣೆಗೆ ಪ್ರವೇಶ ಪಡೆಯುವುದು ಈ ನಾಟಕದ ಕೇಂದ್ರ ಕಥನ.

ಮಾತು ಮತ್ತು ಹಾಡುಗಳು ಪರಸ್ಪರ ಹೆಗಲೆಣೆಯಾಗಿ ಕೈಜೋಡಿಸುತ್ತ ಮೂರು ಘಂಟೆಗಳಿಗೂ ಮೀರಿ ಸಂಗೀತಲೋಕದೊಳಗೆ ಸವಾರಿ ಮಾಡಿಸುವ ಈ ಅಪರೂಪದ ನಾಟಕವು ಮರಾಠಿ ಸಂಗೀತನಾಟಕ ಪ್ರಕಾರದ ಹಲವು ಇತಿಹಾಸ ಪ್ರಸಿದ್ಧ ಗೀತೆಗಳನ್ನು ಒಳಗೊಂಡಿದೆ. ಹತ್ತು ವರ್ಷಗಳ ಹಿಂದೆ ಮೊದಲು ಪ್ರಯೋಗಗೊಂಡ ಈ ನಾಟಕವು ಈಗಾಗಲೇ ಭಾರತಾದ್ಯಂತ ಪ್ರತಿಷ್ಠಿತ ನಾಟಕೋತ್ಸವಗಳಲ್ಲಿ ಪ್ರದರ್ಶನಗೊಂಡು ಮನ್ನಣೆ ಕೂಡ ಗಳಿಸಿದೆ.

**ಸಂಜೆ ೭ ಗಂಟೆಗೆ**

not to be
printed
↓
Page 8

## ಅಕ್ಟೋಬರ್ ೮ ಶನಿವಾರ

photo to be printed here
see cd for the photo with this file no.
↓
**08CC11**

ಆಹ್ವಾನಿತ ನಾಟಕ

# ಗೋರಾ

ಮೈಸೂರಿನ ರಂಗಾಯಣ ತಂಡದಿಂದ

ರಬೀಂದ್ರನಾಥ ಟ್ಯಾಗೋರ್ ಕಾದಂಬರಿ ಆಧರಿಸಿದ ಪ್ರಯೋಗ

**ನಿರ್ದೇಶನ: ಪ್ರಕಾಶ ಬೆಳವಾಡಿ**

ರಬೀಂದ್ರನಾಥ ಟ್ಯಾಗೋರರ ೧೫೦ನೇ ಜನ್ಮವರ್ಷವು ದೇಶಾದ್ಯಂತ ಆಚರಣೆಯಾಗುತ್ತಿರುವ ಈ ಸಂದರ್ಭದಲ್ಲಿ ಅವರ ಕೃತಿಗಳ ಮರುಓದು ಮತ್ತು ಮರುಪ್ರಸ್ತುತಿಯ ಹಲವು ಪ್ರಯೋಗಗಳು ನಡೆಯುತ್ತಿದ್ದು ರಂಗಾಯಣ ತಂಡದ ಈ ಪ್ರಯೋಗ ಕೂಡ ಅದೇ ಸಾಲಿನಲ್ಲಿ ಬಂದಿದೆ.

ಟ್ಯಾಗೋರರ 'ಗೋರಾ' ಕಾದಂಬರಿ ತುಂಬ ನಿಬಿಡವಾದ ಪಾತ್ರ-ಕಥನ-ಸನ್ನಿವೇಶಗಳನ್ನೊಳಗೊಂಡ ಬೃಹತ್ ಕೃತಿ. ೧೯ನೆಯ ಶತಮಾನದ ಬಂಗಾಳದಲ್ಲಿ ಒಂದೆಡೆ ಬ್ರಿಟಿಷ್ ವಸಾಹತುಶಾಹಿ ಆಡಳಿತವು ಕಾಲೂರುತ್ತಿದ್ದರೆ, ಇನ್ನೊಂದೆಡೆ ಅದಕ್ಕೆ ವಿಭಿನ್ನ ಪ್ರತಿಕ್ರಿಯೆಗಳು ಕಾಣಿಸಲಾರಂಭಿಸಿದ್ದವು – ಪುನರುತ್ಥಾನವಾದಿ ಹಿಂದುತ್ವ, ಸುಧಾರಣಾವಾದಿ ಬ್ರಹ್ಮಸಮಾಜ ಮತ್ತು ಪಾಶ್ಚಾತ್ಯೀಕರಣಗೊಂಡ ಮಧ್ಯಮವರ್ಗಗಳು ಈ ಪ್ರತಿಕ್ರಿಯೆಯ ವಿಭಿನ್ನ ಮುಖಗಳು. ಇಂಥ ಪ್ರತಿಕ್ರಿಯೆಗಳನ್ನು ಬಿಂಬಿಸುವ ಮೂರ್ನಾಲ್ಕು ಕುಟುಂಬಗಳು ಮತ್ತು ಹತ್ತಾರು ಪಾತ್ರಗಳ ಮೂಲಕ ಆ ಕಾಲದ ಸಂಕಟ ಮತ್ತು ಸಂಘರ್ಷಗಳನ್ನು ಈ ಕೃತಿ ಗ್ರಹಿಸುತ್ತದೆ. ಕೃತಿಯ ಕೇಂದ್ರಪಾತ್ರವಾದ ಉಗ್ರ ಹಿಂದುವಾದಿ ಗೋರಾ, ಸ್ವತಃ ಹಿಂದು ಅಲ್ಲವೆಂಬ ವಿಪರ್ಯಾಸದೊಂದಿಗೆ ಮುಕ್ತಾಯಗೊಳ್ಳುವ ಈ ಕೃತಿ ಅಂದಿಗೆಷ್ಟೋ ಇಂದಿಗೂ ಸಂಗತ.

ಕಾದಂಬರಿ ಅಥವಾ ಕೃತಿಕಾರನನ್ನು ಇಡಿಯಾಗಿ ಪ್ರತಿನಿಧಿಸುವ ಯತ್ನ ಮಾಡುವ ಬದಲು, ಮೂಲಕೃತಿಯ ಕಥೆ-ಪಾತ್ರ-ಸನ್ನಿವೇಶಗಳ ನಿಷ್ಠ ಪ್ರತಿಫಲನೆಯೊಂದನ್ನು ಮಾಡುವುದು ಪ್ರಸ್ತುತ ರಂಗಪ್ರಸ್ತುತಿಯ ಆಶಯ.

**ಸಂಜೆ ೭ ಗಂಟೆಗೆ**